**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ರಾಜ್ಯ ಚುನಾವಣಾ ಆಯೋಗದ ಆಯುಕ್ತರ ಉಪಯೋಗಕ್ಕಾಗಿ ಹೊಸ ವಾಹನವನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ:

1. ರಾಜ್ಯ ಚುನಾವಣಾ ಆಯೋಗ ರವರ ಪತ್ರ ಸಂಖ್ಯೆ:ರಾಚುಆ 23 ಸಿಬ್ಬಂದಿ 2019, ದಿನಾಂಕ: 31-07-2019.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 329 ಜಿಪಸ 2018, ದಿನಾಂಕ:21-11-2019.
3. ರಾಜ್ಯ ಚುನಾವಣಾ ಆಯೋಗ ರವರ ಪತ್ರ ಸಂಖ್ಯೆ:ರಾಚುಆ 23 ಸಿಬ್ಬಂದಿ 2019, ದಿನಾಂಕ: 16-12-2019.
4. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 452 ವೆಚ್ಚ 6/2020, ದಿನಾಂಕ: 16-04-2020.

ಪ್ರಸ್ತಾವನೆ:

ಮೇಲೆ ಓದಲಾದ(1)ರ ಪತ್ರದಲ್ಲಿ ಪ್ರಸ್ತಾವನೆಯಲ್ಲಿ ಆಯೋಗದ ಅನುಪಯುಕ್ತ ವಾಹನ ಸಂಖ್ಯೆ: ಕೆ.ಎ 04 ಜಿ-580 ಟಾಟಾ ಇಂಡಿಗೋ ವಾಹನವನ್ನು ನಿಯಮಾನುಸಾರ ದಿನಾಂಕ:16-07-2019 ರಂದು ಹರಾಜಿನ ಮೂಲಕ ವಿಲೇವಾರಿ ಮಾಡಲಾಗಿರುತ್ತದೆ ಎಂದು ತಿಳಿಸುತ್ತಾ, ಚುನಾವಣಾ ಆಯುಕ್ತರ ಕರ್ತವ್ಯ ನಿರ್ವಹಣೆ ಹಾಗೂ ರಾಜ್ಯದಲ್ಲಿ ಪ್ರವಾಸವನ್ನು ಕೈಗೊಳ್ಳಲು ಹೊಸದಾಗಿ Innova Crysta ವಾಹನವನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿದ್ದರು. 2020ರಲ್ಲಿ ಗ್ರಾಮ ಪಂಚಾಯಿತಿ ಸಾರ್ವತ್ರಿಕ ಚುನಾವಣೆ ಹಾಗೂ 2021 ರಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಸಾರ್ವತ್ರಿಕ ಚುನಾವಣೆ ಜರುಗಲಿದ್ದು, ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಬೇಕಾಗಿರುತ್ತದೆ. ಈ ಕಾರಣಗಳಿಂದ ರಾಜ್ಯ ಚುನಾವಣಾ ಆಯುಕ್ತರಿಗೆ ಹೊಸ ಕಾರಿನ ಅವಶ್ಯಕತೆ ಇರುತ್ತದೆ ಎಂದು ತಿಳಿಸುತ್ತಾ ಸದರಿ ವೆಚ್ಚವನ್ನು 2019-20ನೇ ಸಾಲಿಗೆ ರಾಜ್ಯ ಚುನಾವಣಾ ಆಯೋಗದ ಲೆಕ್ಕ ಶೀರ್ಷಿಕೆ:2515-00-101-0-11(059) ರಡಿಯಲ್ಲಿ ಬಿಡುಗಡೆಯಾಗಿ ದಿನಾಂಕ:31-07-2019ರ ಅಂತ್ಯಕ್ಕೆ ಲಭ್ಯವಿರುವ ರೂ.78.00ಲಕ್ಷ ಅನುದಾನದಲ್ಲಿಯೇ ಸದರಿ ವೆಚ್ಚವನ್ನು ಭರಿಸಲಾಗುವುದು ಎಂದು ತಿಳಿಸಿದ್ದರು. ಈ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದ್ದು, ಆರ್ಥಿಕ ಇಲಾಖೆಯ ಸಹಮತಿಗಾಗಿ ದಿನಾಂಕ:07-08-2019ರಂದು ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯು ದಿನಾಂಕ: 13-11-2019ರಂದು ಟಿಪ್ಪಣಿ ಸಂಖ್ಯೆ:ಆಇ 452 ವೆಚ್ಚ-6/2019, ದಿನಾಂಕ:13-11-2019ರಲ್ಲಿ Toyota Corolla ವಾಹನವನ್ನು ರೂ.14.00ಲಕ್ಷಗಳಲ್ಲಿ ಖರೀದಿಸಲು ಸಹಮತಿಸಿತ್ತು. ಇದರನ್ವಯ ಮೇಲೆ ಓದಲಾದ(2)ರ ಸರ್ಕಾರದ ಆದೇಶವನ್ನು ಹೊರಡಿಸಲಾಗಿತ್ತು.

ಆದರೆ, ರಾಜ್ಯ ಚುನಾವಣಾ ಆಯೋಗವು ಮೇಲೆ ಓದಲಾದ (3)ರ ಪತ್ರದಲ್ಲಿ ರಾಜ್ಯ ಚುನಾವಣಾ ಆಯೋಗದ ಆಯುಕ್ತರ ಹುದ್ದೆಯು ಉಚ್ಚನ್ಯಾಯಾಲಯದ ನ್ಯಾಯಾಧೀಶರ ಹುದ್ದೆಗೆ ಸಮಾನಾಂತರವಾಗಿದ್ದು, ಉಚ್ಚನ್ಯಾಯಾಲಯದ ನ್ಯಾಯಾಧೀಶರಿಗೆ ಅನ್ವಯಿಸುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಬೇಕಾಗಿದೆ ಎಂದು ತಿಳಿಸುತ್ತಾ, ರಾಜ್ಯ ಚುನಾವಣಾ ಆಯೋಗದ ಆಯುಕ್ತರಿಗೆ ಉಚ್ಚನ್ಯಾಯಾಲಯದ ನ್ಯಾಯಾಧೀಶರುಗಳಿಗೆ ನೀಡಿರುವಂತೆ ವಾಹನ ಸೌಲಭ್ಯವನ್ನು ಒದಗಿಸಬೇಕಾಗಿರುತ್ತದೆ. ಆದುದರಿಂದ ಇವರಿಗೆ ಹೊಸ ವಾಹನವನ್ನು Innova (ZX)7S ಖರೀದಿಸಲು ರೂ.21.00ಲಕ್ಷಗಳ ಆರ್ಥಿಕ ಮಿತಿಯೊಳಗೆ ಖರೀದಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಈ ಬಗ್ಗೆ ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿದೆ ಹಾಗೂ ಹೊಸ ವಾಹನವನ್ನು ರೂ.22.00ಲಕ್ಷಗಳ ಆರ್ಥಿಕ ಮಿತಿಯೊಳಗೆ ಖರೀದಿಸಲು ಆರ್ಥಿಕ ಇಲಾಖೆಯ ಮೇಲೆ ಓದಲಾದ (4)ರ ಅನಧಿಕೃತ ಟಿಪ್ಪಣಿಯಲ್ಲಿ ಸಹಮತಿಯನ್ನು ನೀಡಿದೆ. ಈ ಕಾರಣದಿಂದ ಈಗಾಗಲೇ ಮೇಲೆ ಓದಲಾದ (2)ರ ಸರ್ಕಾರದ ಆದೇಶವನ್ನು ಹಿಂಪಡೆಯಲು ಹಾಗೂ ಹೊಸದಾಗಿ ಆದೇಶದ ಮೂಲಕ ಅನುಮತಿಯನ್ನು ನೀಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 329 ಜಿಪಸ 2018, ಬೆಂಗಳೂರು, ದಿನಾಂಕ:01-06-2020**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಈಗಾಗಲೇ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 329 ಜಿಪಸ 2018, ದಿನಾಂಕ:21-11-2019ನ್ನು ಹಿಂಪಡೆಯಲಾಗಿದೆ. ರಾಜ್ಯ ಚುನಾವಣಾ ಆಯೋಗದಲ್ಲಿರುವ ಕೆಎ-04 ಜಿ-909, Toyoto Corolla ವಾಹನವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ವಶಕ್ಕೆ ನೀಡುವ ಷರತ್ತಿಗೊಳಪಟ್ಟು ರೂ.22.00ಲಕ್ಷದ ಆರ್ಥಿಕ ಮಿತಿಯೊಳಗೆ (Ex-Show Room Rate) ಒಂದು ಹೊಸ

ವಾಹನವನ್ನು ಖರೀದಿಸಲು ಹಾಗೂ ಈ ಸಂಬಂಧವಾದ ವೆಚ್ಚವನ್ನು 2020-21ನೇ ಸಾಲಿಗೆ ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸಿರುವ ಅನುದಾನದಲ್ಲಿ ಭರಿಸಲು ಅನುಮತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 452 ವೆಚ್ಚ-6/2020, ದಿನಾಂಕ: 16-04-2020ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

01/06/2020
(ಪಿ. ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

01.06.2020

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
4. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ) 1ನೇ ಮಹಡಿ, ನಂ-8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-52.
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-6), ವಿಧಾನಸೌಧ, ಬೆಂಗಳೂರು.
7. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ನಿರ್ದೇಶಕರು, ಪಂಚಾಯತ್ ರಾಜ್-2, ಗ್ರಾಅಪ ಇಲಾಖೆ, ಇವರ ಆಪ್ತ ಸಹಾಯಕರು.